ವರ್ಷಗಳ ವೃತ್ತಿಜೀವನದಲ್ಲಿ ಅವರು ಬರೆದದ್ದೆಲ್ಲ ಬಹುತೇಕವಾಗಿ ಇಂಗ್ಲಿಷ್‌ನಲ್ಲಿ. ಸೇವಾ ನಿವೃತ್ತಿಯ ನಂತರದ ಮೂವತ್ತೈದು ವರ್ಷಗಳಲ್ಲಿ ಕನ್ನಡದಲ್ಲಿ, ಕನ್ನಡ ಸಾಹಿತ್ಯದ ಕುರಿತು ಬರೆದರು. ಹೀಗೆ ಅವರ ಬರವಣಿಗೆಯ ಬಾಳಿನಲ್ಲಿ 'ಇಂಗ್ಲಿಷ್' ಹಾಗೂ 'ಕನ್ನಡ' ಹಂತಗಳೆಂದು ಸ್ಥೂಲವಾಗಿ ಗುರುತಿಸಬಹುದಾದ ಎರಡು ಸ್ಪಷ್ಟವಾದ ಹಂತಗಳಿವೆ. 1985ರಲ್ಲಿ ಅವರು ಬರೆದ 'ವಿಮರ್ಶೆಗೆ ಬಂದ ವಿಪತ್ತು' ಇವುಗಳ ಮಧ್ಯಬಿಂದು.

ಇಂಗ್ಲಿಷ್ ಹಂತದ ಆಮೂರರ ಬರಹಗಳೆಲ್ಲ ಅವರ ವೃತ್ತಿಜೀವನದೊಂದಿಗೆ ಹಾಗೂ ಇಂಗ್ಲಿಷ್ ವಿಭಾಗಗಳ ಆಸಕ್ತಿ ಮತ್ತು ಆದ್ಯತೆಗಳೊಂದಿಗೆ ತಳಕು ಹಾಕಿಕೊಂಡಿವೆ. ಕಾಮಿಡಿಯ ಪರಿಕಲ್ಪನೆಯನ್ನು ಕುರಿತ ಅವರ ಡಾಕ್ಟರಲ್ ಸಂಶೋಧನೆ, ಎಲಿಯಟ್‌ನ ಕಾವ್ಯಮೀಮಾಂಸೆಯನ್ನು ಕುರಿತ ಅವರ ಫುಲ್‌ಬ್ರೈಟ್ ಸಂಶೋಧನೆ, ಅವರಿಗೆ ಅಕಡೆಮಿಕ್ ವಲಯದಲ್ಲಿ ತುಂಬ ಪ್ರಸಿದ್ಧಿಯನ್ನು ತಂದುಕೊಟ್ಟ 'ಎ ಕ್ರಿಟಿಕಲ್ ಸ್ಪೆಕ್ಟ್ರಮ್', 'ಇಮೆಜಸ್ ಆ್ಯಂಡ್ ಇಂಪ್ರೆಶನ್ಸ್'ನಂತಹ ಸಂಗ್ರಹಗಳಲ್ಲಿರುವ ಪ್ರಬಂಧಗಳು ಇವುಗಳಿಂದ ನಮ್ಮ ವಿಶ್ವವಿದ್ಯಾಲಯಗಳ ಇಂಗ್ಲಿಷ್ ವಿಭಾಗಗಳ ಆದ್ಯತೆಗಳೇನಿದ್ದವೆಂದು ಸುಲಭವಾಗಿ ಗುರುತಿಸಬಹುದು. ಈ ಬರಹಗಳಲ್ಲಿ ಶಿಸ್ತು, ಸಂಯಮ, ಪಾಂಡಿತ್ಯ ಮೊದಲಾದ ಅತ್ಯುತ್ತಮ ಸಂಶೋಧನ ಪ್ರಬಂಧದಲ್ಲಿ ಅಪೇಕ್ಷಿತವಾದ ಎಲ್ಲ ಲಕ್ಷಣಗಳೂ ಇವೆ. ಚರ್ಚೆಗಾಗಿ ಎತ್ತಿಕೊಂಡ ಕೃತಿಯನ್ನು ನವ್ಯ ವಿಮರ್ಶೆಯ ಪರಿಕರಗಳ ಸಹಾಯದಿಂದ ಅಚ್ಚುಕಟ್ಟಾಗಿ ವ್ಯಾಖ್ಯಾನಿಸುವ, ಅಕಡೆಮಿಕ್ ಆಸ್ಥೆಯ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಬಂಧಗಳಿವು. ಆದರೆ, ಅವು ಕೇಳಿಕೊಳ್ಳುವ ಪ್ರಶ್ನೆಗಳೆಲ್ಲ ಪಶ್ಚಿಮದ ವ್ಯಾಖ್ಯಾನ ಪರಂಪರೆಯಲ್ಲೇ ಹುಟ್ಟಿಕೊಳ್ಳಬಹುದಾದವು; ದೊರಕಿಸಿಕೊಳ್ಳುವ ಉತ್ತರಗಳೂ ಅಲ್ಲೇ ದೊರಕಬಹುದಾದವು.

ಮುಂದಿನ ದಶಕಗಳಲ್ಲಿ ಅವರು ಭಾರತದ ವಿಶ್ವವಿದ್ಯಾಲಯಗಳ ಇಂಗ್ಲಿಷ್ ವಿಭಾಗಗಳು 'ಭಾರತೀಯ'ವಾಗಲು ನಡೆಸಿದ ಪ್ರಯತ್ನಗಳನ್ನು ಬೆಂಬಲಿಸಿದರು ಹಾಗೂ ಆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಇಂತಹ ಪ್ರಯತ್ನಗಳಲ್ಲಿ ಮುಖ್ಯವಾದದ್ದು 'ಭಾರತೀಯ ಇಂಗ್ಲಿಷ್ ಸಾಹಿತ್ಯ'ವೆಂಬ ಅಧ್ಯಯನ ಕ್ಷೇತ್ರವನ್ನು ಶೋಧಿಸಿ ತೆಗೆದದ್ದು, ಈ ಕ್ಷೇತ್ರವನ್ನು ಕುರಿತ ಅವರ ಬರಹಗಳಿದ್ದ ಅವರ ಹಳೆಯ ಕಡತವೊಂದನ್ನು ತಿರುವುತ್ತ 'ಅಂತರ್ಜಲವಿಲ್ಲದಲ್ಲಿ ಬಾವಿ ತೋಡುವ ಪ್ರಯತ್ನ' ಎಂದು ಹೇಳಿದಾಗ ತಮಾಷೆಯ ಪ್ರಸಂಗವೊಂದನ್ನು ನೆನಪಿಸಿಕೊಂಡಿದ್ದರು; ಕೆ.ಆರ್.ಎಸ್. ಐಯ್ಯಂಗಾರರು ಲೀಡ್ಸ್ ವಿಶ್ವವಿದ್ಯಾಲಯದಲ್ಲಿ 'ಇಂಗ್ಲಿಷ್ ಸಾಹಿತ್ಯಕ್ಕೆ ಭಾರತೀಯರ ಕೊಡುಗೆ' ಎಂಬ ಉಪನ್ಯಾಸವನ್ನು ನೀಡಿದಾಗ ಸಭಿಕರಲ್ಲೊಬ್ಬರು ಗಂಭೀರವಾಗಿ ಕೇಳಿದರಂತೆ: "ಮಿ. ಅಯ್ಯಂಗಾರ್, ನೀವು ಪಟ್ಟಿಮಾಡಿರುವ ಈ ಲೇಖಕರೆಲ್ಲ ನಿಜಕ್ಕೂ ಇದ್ದವರೋ ಅಥವಾ ಅವರೆಲ್ಲ ನಿಮ್ಮ ಕಲ್ಪನೆಯ ಸೃಷ್ಟಿಯೊ?" ಏನೇ ಆದರೂ ಈ ವಿದ್ಯಮಾನದ ಪರಿಣಾಮವಾಗಿ ಭಾರತೀಯಾಂಗ್ಲ ಸಾಹಿತ್ಯವು ಮುನ್ನೆಲೆಗೆ ಬಂತು. ಈ ಸಾಹಿತ್ಯದ ಕೇಂದ್ರ ಕಾಳಜಿಗಳ ಬಗ್ಗೆ ಉತ್ಸಾಹವಿರದಿದ್ದ ಆಮೂರರು ಅದನ್ನು ಕುರಿತ ತಮ್ಮ ಬರಹಗಳ ಸಂಪುಟವನ್ನು 'ಉಲ್ಲಂಘನೆಗಳು' (Transgressions) ಎಂದು ಕರೆದರು. ಈ ಸಾಹಿತ್ಯವನ್ನು ವಿಮರ್ಶಿಸುವಾಗ ಅದನ್ನೊಂದು ಪ್ರತ್ಯೇಕ ಸ್ವಯಂಭೂ ಸಾಹಿತ್ಯವೆಂಬಂತೆ ನೋಡುವ 'ಅಸಹಜ ವಿಮರ್ಶಾ ಪದ್ಧತಿ'ಯನ್ನು ವಿರೋಧಿಸಿ ಈ ಸಾಹಿತ್ಯವು ಭಾರತದ ಇನ್ನಿತರ ಭಾಷಾ ಸಾಹಿತ್ಯಗಳೊಂದಿಗೆ ಹೊಂದಿರುವ ಸಾಮ್ಯ ಹಾಗೂ ಸಂಬಂಧಗಳನ್ನು ಚರ್ಚೆಗೆ ಎತ್ತಿಕೊಂಡವರಲ್ಲಿ ಆಮೂರರು ಪ್ರಮುಖರು.

ಇಂಗ್ಲಿಷ್ ವಿಭಾಗಗಳ ಮುಂದಿದ್ದ ಇನ್ನೊಂದು ಆಯ್ಕೆ ಭಾರತೀಯ ಸಾಹಿತ್ಯವಾಗಿತ್ತು. 'ಕಳೆದ ಒಂದು ಶತಮಾನಕ್ಕೂ ಹೆಚ್ಚುಕಾಲ ನಾವು ವಿದೇಶೀ ಸಾಹಿತ್ಯಕ್ಕೆ ಬೇಕಾಗಿದ್ದಕ್ಕಿಂತ ಹೆಚ್ಚು ಲಕ್ಷ್ಯ ನೀಡಿದ್ದೇವೆ. ಈಗ ನಮ್ಮದೇ ಸಾಹಿತ್ಯದ ಕಡೆ ಗಮನಹರಿಸಬೇಕಾದ ಕಾಲ ಬಂದಿದೆ' ಎಂದು